ಮತ್ತು ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ತೆಗೆಯುತ್ತಾರೆ. ಎಲ್ಲೆಲ್ಲಿ ನೀರಿನ ಕೊರತೆಯಿದೆ, ಆ ನೀರಿನ ಕೊರತೆಯನ್ನು ನಮ್ಮ ಸರ್ಕಾರ ನೀಗಿಸಲಿಕ್ಕೆ ಆದ್ಯತೆಯ ಮೇಲೆ ಹಣವನ್ನು ಒದಗಿಸುತ್ತದೆ. ಬಾಕಿ ಇರತಕ್ಕ ಕೆಲಸ ನಿಂತರೂ ಪರವಾಗಿಲ್ಲ.

ವಿಷಯ:- ರಾಜ್ಯದಲ್ಲಿ ಬೀಡಿ ಕಾರ್ಮಿಕರಿಗಾಗಿ ಹಾಕಿಕೊಂಡಿರುವ ಯೋಜನೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 119(1040)

ಶ್ರೀ ಸಂಗಣ್ಣ ಕರಡಿ (ಕೊಪ್ಪಳ):- ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ -

ಅ) ಸರ್ಕಾರವು ರಾಜ್ಯದಲ್ಲಿ ಬೀಡಿ ಕಾರ್ಮಿಕರಿಗಾಗಿ ಹಾಕಿಕೊಂಡಿರುವ ಯೋಜನೆಗಳು ಯಾವುವು?

ಆ) ಸರ್ಕಾರವು ಈ ಕಾರ್ಮಿಕರಿಗಾಗಿ ವಸತಿ, ಆರೋಗ್ಯ, ಶಿಕ್ಷಣ ಹಾಗೂ ಇತರೇ ಸೌಲಭ್ಯಗಳನ್ನು ಒದಗಿಸಿದೆಯೇ?

ಇ) ಒದಗಿಸಿದ್ದಲ್ಲಿ, ಮನೆ ನಿರ್ಮಾಣಕ್ಕೆ ತಗಲುವ ವೆಚ್ಚ ಮತ್ತು ಆರೋಗ್ಯಕ್ಕಾಗಿ ಆಸ್ಪತ್ರೆಗಳು ಎಷ್ಟು? ಹಾಗೂ ಶಿಕ್ಷಣದ ಅಂಗವಾಗಿ ಜಿಲ್ಲಾವಾರು ಸೌಲಭ್ಯಗಳನ್ನು ಪಡೆದ ಕುಟುಂಬಗಳು ಎಷ್ಟು?

ಈ) ಕೊಪ್ಪಳ ನಗರದಲ್ಲಿ ಬೀಡಿ ಕಾರ್ಮಿಕರಿಗೆ ಸರ್ಕಾರ ಮನೆಗಳನ್ನು ನಿರ್ಮಾಣ ಮಾಡಿದೆಯೇ?

ಉ) ಹಾಗಿದ್ದಲ್ಲಿ, ನಿರ್ಮಾಣ ಮಾಡಿದ್ದಲ್ಲಿ ಹೆಚ್ಚಿನ ಹಣವನ್ನು ನೀಡಿ ಒಳ್ಳೆಯ ಮನೆಗಳನ್ನು ಕಟ್ಟಿಸಿ ಸರ್ಕಾರಕ್ಕೆ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಸಿ.ಗುರುನಾಥ್(ಕಾರ್ಮಿಕ ಸಚಿವರು):- (ಅ) ಮತ್ತು (ಆ) ಕೇಂದ್ರ ಸರ್ಕಾರದವರು ಬೀಡಿ ಕಾರ್ಮಿಕರಿಗೆ ಕೇಂದ್ರ ಕಲ್ಯಾಣ ಸಂಸ್ಥೆಗಳ ಮೂಲಕ ಹಮ್ಮಿಕೊಂಡಿರುವ ವೈದ್ಯಕೀಯ, ವಸತಿ ನಿರ್ಮಾಣ, ವಿದ್ಯಾರ್ಥಿ ವೇತನ ಮತ್ತು ಸಾಮೂಹಿಕ ವಿಮಾ ಯೋಜನೆ ಇತ್ಯಾದಿ ಯೋಜನೆಗಳನ್ನು ರಾಜ್ಯ ಸರ್ಕಾರದ ಮೂಲಕ ಕಾರ್ಯಗತಗೊಳಿಸಲಾಗುತ್ತಿದೆ.

ಇ) ಆರೋಗ್ಯದ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಕಲ್ಯಾಣ ಯೋಜನೆಯಲ್ಲಿ ಹಾಗೂ ಇ.ಎಸ್.ಐ. ಯೋಜನೆಯಡಿಯಲ್ಲಿ ಸದರಿ ಕಾರ್ಮಿಕರು ವೈದ್ಯಕೀಯ ಸೌಲಭ್ಯಗಳನ್ನು ಪಡೆಯುತ್ತಾರೆ.

ಈ) - ಇಲ್ಲ -

ಉ) - ಉದ್ಭವಿಸುವುದಿಲ್ಲ -

ಶ್ರೀ ಸಂಗಣ್ಣ ಕರಡಿ:- ಮಾನ್ಯ ಅಧ್ಯಕ್ಷರೆ, ಬೀಡಿ ಕಾರ್ಮಿಕರ ಪ್ರಶ್ನೆಯನ್ನು ನಾನು ಎತ್ತಿದ್ದೇನೆ. ಮೂಲತಃ ಕಾರ್ಮಿಕರಿಗೆ ಮನೆಗಳನ್ನು ಸರ್ಕಾರ ಕಲ್ಪಿಸಿಕೊಡತಕ್ಕ ಯೋಜನೆ ಇದೆ. ಅದರ ನಿಗದಿತ ವೆಚ್ಚ ಎಷ್ಟೆಂದು ನಾನು ಕೇಳಿದ್ದೇನೆ. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ವೆಚ್ಚದ ನಿಗದಿತ ಪ್ರಮಾಣವನ್ನು ತೋರಿಸಿಲ್ಲ. ಅದನ್ನು ವಿವರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಗುರುನಾಥ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ. ಇದರಲ್ಲಿ ನಾವು ಮಾಡತಕ್ಕ ಯೋಜನೆ ಏನಿದೆ, ಕೇಂದ್ರ ಸರ್ಕಾರದ ಕಲ್ಯಾಣ

ಕಾರ್ಯಕ್ರಮದ ಯೋಜನೆಯಡಿಯಲ್ಲಿ ಈ ಯೋಜನೆಯನ್ನು ನಾವು ಮಾಡುತ್ತಿದ್ದೇವೆ. ಈಗಾಗಲೇ ಇದರಲ್ಲಿ ಉತ್ತರಿಸಿದ ಹಾಗೆ ಆರೋಗ್ಯ ಸೌಲಭ್ಯ, ಸಾಮೂಹಿಕ ವಿಮಾ ಯೋಜನೆ, ಹೆರಿಗೆ ಸೌಲಭ್ಯ, ಮನೆ ಕಟ್ಟತಕ್ಕ ವಿಷಯ ಅದು ಅಲ್ಲದೆ ವಿದ್ಯಾರ್ಥಿ ವೇತನ ಹಲವಾರು ಯೋಜನೆಗಳನ್ನು ನಮ್ಮ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ವತಿಯಿಂದ ನಾವು ಮಾಡಿಕೊಡುತ್ತಿದ್ದೇವೆ. ಬೀಡಿ ಕಾರ್ಮಿಕರ ಸಲುವಾಗಿ ಕಟ್ಟಡವನ್ನು ಸಹ ಕಟ್ಟಿಸಿ ಕೊಡುತ್ತಿದ್ದೇವೆ. ಅದಕ್ಕಾಗಿ 25 ಸಾವಿರ ರೂಪಾಯಿ ಅಂದಾಜು ಖರ್ಚು ನಿಗದಿಪಡಿಸಿದ್ದೇವೆ. ಅದು ಅಲ್ಲದೆ ಅವರಿಗೆ 9 ಸಾವಿರ ರೂಪಾಯಿಗಳನ್ನು ಸಬ್ಸಿಡಿಯಾಗಿ ಕೊಡುತ್ತಿದ್ದೇವೆ. ಈಗ ಅಂದಾಜು ನಮ್ಮ ರಾಜ್ಯದಲ್ಲಿ 1425 ಮನೆಗಳನ್ನು ಕಟ್ಟಿದ್ದೇವೆ. ಈಗಾಗಲೇ 1 ಸಾವಿರ ಮನೆಗಳನ್ನು ಮೈಸೂರಿನಲ್ಲಿ ಕಟ್ಟುತ್ತಿದ್ದೇವೆ. 425 ಮನೆಗಳನ್ನು ಚಾಮರಾಜನಗರದಲ್ಲಿ ಕಟ್ಟುತ್ತಿದ್ದೇವೆ. ರಾಜ್ಯದಲ್ಲಿ ಹಲವಾರು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ.

ಶ್ರೀ ಸಂಗಣ್ಣ ಕರಡಿ:- ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ 300 ಜನ ಬೀಡಿ ಕಾರ್ಮಿಕರು ಇದ್ದು ಅವರಿಗೆ ಮನೆಯ ಕೊರತೆಯಿದೆಯೆಂದು ನಾನು ಮನವಿಯನ್ನು ಸಲ್ಲಿಸಿದ್ದೆ. ಅದರ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಗಳು ಉತ್ತರವನ್ನು ಕೊಟ್ಟಿಲ್ಲ.

ಶ್ರೀ ಸಿ.ಗುರುನಾಥ್:- ಮಾನ್ಯ ಅಧ್ಯಕ್ಷರೆ, ಈಗ ಅಲ್ಲಿ ಕೊಡತಕ್ಕ ಸೌಲಭ್ಯ ಏನಿದೆ, ಈ ಸೌಲಭ್ಯವನ್ನು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಕೊಡಲಾಗುತ್ತದೆ. ಮೊದಲನೆಯದಾಗಿ ಈ ಸೌಲಭ್ಯವನ್ನು ಪಡೆಯುವವರ ಸರ್ವೆಯನ್ನು ಮಾಡಲಾಗುತ್ತದೆ. ಅಲ್ಲಿ ಬೀಡಿ ಕೆಲಸಗಾರರು ಎಷ್ಟಿದ್ದಾರೆ, ಅಲ್ಲಿ ಅವರಿಗೆ ಭೂಮಿ ಇದೆಯೋ ಇಲ್ಲವೋ ಅಲ್ಲದೆ ಅವರು ಕೊಡತಕ್ಕ ರಿಫಂಡ್ ಏನಿದೆ, ಮನೆ ಕಟ್ಟಿದ ನಂತರ ಸಾಲ ತೀರಿಸಬೇಕಾದ ವ್ಯವಸ್ಥೆ, ಅನುಕೂಲ ಆ ಶಕ್ತಿ ಬೀಡಿ ಕೆಲಸಗಾರನಿಗೆ ಇದೆಯೋ ಇಲ್ಲವೋ ಎನ್ನುವುದನ್ನು ಎಲ್ಲವನ್ನು ಪರಿಶೀಲನೆ ಮಾಡಿ ಈ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

ಶ್ರೀ ಎಸ್.ಯೋಗೀಶ್ ಭಟ್:- ಮಾನ್ಯ ಅಧ್ಯಕ್ಷರೆ, 1995-96ನೇ ಸಾಲಿನಲ್ಲಿ ಎಷ್ಟು ಮನೆಗಳನ್ನು ಬೀಡಿ ಕಾರ್ಮಿಕರಿಗಾಗಿ ಕಟ್ಟಿದ್ದೀರಿ? ಇದೇ ರೀತಿಯಲ್ಲಿ 1996-97ನೇ ಸಾಲಿಗೆ ಎಷ್ಟು ಮನೆಗಳನ್ನು ಕಟ್ಟಲಿಕ್ಕೆ ಇದ್ದೀರಿ? ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ವಿಶೇಷವಾಗಿ ಅಲ್ಲಿ ಲಕ್ಷಾಂತರ ಮಂದಿ ಬೀಡಿ ಕಟ್ಟುವ ಕೆಲಸದಲ್ಲಿ ತೊಡಗಿದ್ದಾರೆ. ಅಲ್ಲಿ ಜಾಸ್ತಿ ಸಂಖ್ಯೆಯಲ್ಲಿರುವ ಹಿನ್ನಲೆಯಲ್ಲಿ ಎಷ್ಟು ಮನೆಗಳನ್ನು ಅವರಿಗಾಗಿ ಕಟ್ಟಲಿಕ್ಕೆ ತಾವು ಇಚ್ಚಿಸುತ್ತೀರಿ? ಎರಡನೆಯದು ಲಕ್ಷಾಂತರ ಮಂದಿ ಬೀಡಿ ಕಾರ್ಮಿಕರು ನಿರುದ್ಯೋಗಿಗಳಾಗುವಂತಹ ಒಂದು ಸ್ಥಿತಿ ಇದೆ. ಅದು ಏನೆಂದರೆ ಸಣ್ಣ ಸಿಗರೇಟ್ ತಯಾರಿಕೆಗೆ ಇವತ್ತು ಬೃಹತ್ ಉದ್ದಿಮೆಗಳು ಇನ್ನಿತರೆ ಉದ್ದಿಮೆಗಳು ಕೈ ಹಾಕಿ ಸಣ್ಣ ಸಿಗರೇಟ್ ತಯಾರಿ ಮಾಡಲಿಕ್ಕೆ ಇದ್ದಾರೆ. ಇವತ್ತು ಲಕ್ಷಾಂತರ ಮಂದಿ ಬೀಡಿ ಕಾರ್ಮಿಕರು ನಿರುದ್ಯೋಗಿಗಳಾಗುತ್ತಾರೆ. ಅವೊಂದು ಹಿನ್ನೆಲೆಯಲ್ಲಿ ನೀವು ಸಣ್ಣ ಸಿಗರೇಟು ತಯಾರಿಕೆಯನ್ನು ತಾವು ಬ್ಯಾನ್ ಮಾಡುತ್ತೀರಾ? ಕೊನೆಯದಾಗಿ ಕಾರ್ಮಿಕ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರುಗಳ ನೇಮಕವನ್ನು ತಕ್ಷಣ ಮಾಡಲಿಕ್ಕೆ ಸಾಧ್ಯವಿದೆಯೇ? ಐದು ತಿಂಗಳುಗಳಿಂದ ನ್ಯಾಯಧೀಶರ ನೇಮಕವಾಗದೆ ಸಾವಿರಾರು ಕೇಸುಗಳು ಬಾಕಿಯಿದ್ದು, ನಾನು ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾಗಿ ಉಲ್ಲೇಖ ಮಾಡುವಂತಹದ್ದು ಕಾರ್ಮಿಕ ನ್ಯಾಯಾಲಯಕ್ಕೆ ನ್ಯಾಯಧೀಶರನ್ನು ಎಲ್ಲಾ

ಸೌಲಭ್ಯಗಳ ಜೊತೆಗೆ ಕಳುಹಿಸಲಿಕ್ಕೆ ಸಾಧ್ಯವಿದೆಯೇ?

ಶ್ರೀ ಸಿ.ಗುರುನಾಥ್:- ಈಗಾಗಲೇ ಬೀಡಿ ಉದ್ಯೋಗದಲ್ಲಿರತಕ್ಕಂಥ ಕೆಲಸಗಾರರಾಗಲೀ ಕಾರ್ಖಾನೆಗಾಗಲೀ ನಾವು ಅವರಿಗೆ ಲೈಸೆನ್ಸ್ ಕೊಡುತ್ತಾ ಇಲ್ಲ. ಕೇಂದ್ರ ಸರ್ಕಾರ ಕೊಡುತ್ತಾ ಇದೆ. ಈಗ ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಈ 5 ಸೆಂಟಿಮೀಟರ್ ಸಿಗರೇಟ್ ಏನಿದೆ ಇದರ ಸಲುವಾಗಿ ನಾನೂ ಸಹ 31, 32ನೇ ಕಾರ್ಮಿಕ ಸಮ್ಮೇಳನದಲ್ಲೂ ಸಹ ಕೇಂದ್ರ ಕಾರ್ಮಿಕ ಮಂತ್ರಿಯವರಿಗೆ ಒತ್ತಾಯ ಮಾಡಿದ್ದೇವೆ, ಇದು ರದ್ದುಪಡಿಸಬೇಕು, ಲೈಸೆನ್ಸ್ ಕೊಡಬಾರದು; ಅದರಿಂದ ನಮಗೂ ಅನಾಹುತ ಆಗುತ್ತಾ ಇದೆ, ಇದರಲ್ಲಿ ಕಾಂಪೋಸಿಷನ್ ವ್ಯತ್ಯಾಸ ಬಹಳ ಕಡಿಮೆ ಇದೆ ಸಣ್ಣ ಬೀಡಿಗೂ ಸಿಗರೇಟಿಗೂ ಎಂದು ನಾವು ಕೇಂದ್ರ ಸರ್ಕಾರಕ್ಕೆ ಕೇಳಿಕೊಂಡಿದ್ದೇವೆ. ಇದಲ್ಲದೆ ಅವರು ಬೇರೆ ಕೆಲವು ವಿಷಯ ಹೇಳಿರುತ್ತಾರೆ. ಲೇಬರ್ ಕೋರ್ಟ್ ಬಗ್ಗೆ. ಲೇಬರ್ ಕೋರ್ಟ್‌ನಲ್ಲಿರತಕ್ಕ ಹಲವಾರು ನ್ಯಾಯಾಧೀಶರ ಹುದ್ದೆಗಳನ್ನು ಎಲ್ಲಾ ಸ್ಥಳದಲ್ಲಿ ಸಾಕಷ್ಟು ನಾವು ಭರ್ತಿ ಮಾಡಿದ್ದೇವೆ. ಸಾಕಷ್ಟು ಕೇಸೂ ಸಹ ಬಗೆಹರಿಸಿದ್ದೇವೆ. ಹಿಂದಿನ ವರ್ಷದಲ್ಲಿ 17 ಸಾವಿರಕ್ಕಿಂತ ಹೆಚ್ಚು ಕೇಸ್‌ಗಳಿತ್ತು. ಈಗಾಗಲೇ 3 ಸಾವಿರಕ್ಕಿಂತ ಹೆಚ್ಚು ಕೇಸುಗಳಲ್ಲಿ ಪರಿಹಾರ ಕಂಡು ಹಿಡಿದು ನ್ಯಾಯ ದೊರಕಿಸಿಕೊಟ್ಟಿದ್ದೇವೆ ಅಂತ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಅಧ್ಯಕ್ಷರು:- ಪ್ರಶ್ನೋತ್ತರ ಮುಗಿಯಿತು.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಸಭಾಧ್ಯಕ್ಷರೆ.....

ಅಧ್ಯಕ್ಷರು:- ಒಂದು ನಿಮಿಷ ಇರಿ. ಕ್ವೆಶ್ಚನ್ಸ್‌ಗೆ ಸಂಬಂಧಪಟ್ಟಂತೆ ಸ್ವಲ್ಪ ಹೇಳಬೇಕಾಗಿದೆ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಲ್ಲಿ ಒಂದು ಸೂಚನೆ. ಅನೇಕ ಜನ ಮಾನ್ಯ ಸದಸ್ಯರುಗಳು ಕಳುಹಿಸಿರತಕ್ಕಂಥ ಸ್ಟಾರ್ಡ್ ಮತ್ತು ಅನ್‌ಸ್ಟಾರ್ಡ್ ಪ್ರಶ್ನೆಗಳಿಗೆ ಉತ್ತರಗಳನ್ನು ಕಳುಹಿಸಿಕೊಡುವುದಕ್ಕೆ ಸರ್ಕಾರದ ವತಿಯಿಂದ ಕೆಲವು ಸಮಯ ಕೇಳಿದ್ದಾರೆ. ಸಮಯ ಕಡಿಮೆ ಇದ್ದು ಸಮಯ ಕೇಳತಕ್ಕದ್ದು, ವಿವರವಾದ ಮಾಹಿತಿಯನ್ನು ಲಭ್ಯ ಮಾಡಿಕೊಂಡು ಉತ್ತರ ಕಳುಹಿಸುವುದಕ್ಕೆ ಸಮಯದ ಅಗತ್ಯ ಇರುತ್ತದೆ. ನಾನು ಎಲ್ಲಾ ಕೇಸ್‌ಗಳಲ್ಲೂ ಆಗಬಹುದು ಅಂತ ಹೇಳುವುದಿಲ್ಲ. ಕೆಲವು ಅತಿ ಸೂಕ್ಷ್ಮವಾಗಿರತಕ್ಕ ಪ್ರಶ್ನೆಗಳ ವಿಚಾರದಲ್ಲಿ ಯಾವುದೋ ಒಂದು ಹಂತದಲ್ಲಿರತಕ್ಕ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಸರ್ಕಾರಕ್ಕೆ ಮಾಹಿತಿಯನ್ನು ಕೊಡುವುದು ನಿಧಾನ ಮಾಡುತ್ತಾರೆ ಎನ್ನತಕ್ಕಂಥ ಅಭಿಪ್ರಾಯ ಕೆಲವು ಸದಸ್ಯರುಗಳಿಗೆ ಬಂದು ಅವರು ನನ್ನನ್ನು ಬಂದು ಖಾಸಗಿಯಾಗಿ ಭೇಟಿಯಾಗಿದ್ದಾರೆ. ಆ ರೀತಿಯ ಅಭಿಪ್ರಾಯಗಳಿಗೆ ಅವಕಾಶ ಇರಲಾರದಂತೆ ಎಲ್ಲಾ ಮಾನ್ಯ ಸಚಿವರುಗಳಿಗೆ ದಯಮಾಡಿ ಸೂಚನೆ ಕೊಟ್ಟು ಯಾರು ಯಾರು ಪ್ರಶ್ನೆಗಳಿಗೆ ಉತ್ತರ ಕಳುಹಿಸಿಕೊಡುವುದಕ್ಕೆ ಸಮಯಾವಕಾಶವನ್ನು ಕೇಳಿದ್ದಾರೆ, ಮೂರು ವಾರಗಳ ಒಳಗಾಗಿ ಎಲ್ಲಾ ಸದಸ್ಯರಿಗೆ ಉತ್ತರ ತಲುಪುವುದಕ್ಕೆ ಅದು ಲಿಖಿತ ಮೂಲಕ ಇರತಕ್ಕಂಥ ಪ್ರಶ್ನೆಯಾಗಲೀ ಅಥವಾ ಸ್ಟಾರ್ಡ್ ಪ್ರಶ್ನೆ ಇರಲಿ ಎಲ್ಲದಕ್ಕೂ ಕೂಡ ಉತ್ತರ ಕಳುಹಿಸಿಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಸನ್ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳಿಗೂ ಇನ್ನೂ ಉತ್ತರ ಬಂದಿಲ್ಲ.